ನಿನ್ನ ಒಪ್ಪಿಗೆ ಇದೆಯೇನು?' ಎಂದು ಕೇಳಿಬಿಟ್ಟರು. ಇನ್ನೂ ನಿವೃತ್ತಿಯ ದಿನ ಬಂದಿದ್ದಿಲ್ಲ. 'ನಾನು ನಿಮ್ಮನ್ನ ಆ ಮನಸ್ಸಿನಿಂದ ಭಾವಿಸಿಲ್ಲ, ಸರ್. ನೀವು ನನ್ನ ತಂದೆ ಸಮಾನರಲ್ಲ; ತಂದೆಯೇ' ಎಂದು ಹೇಳಿಬಿಟ್ಟೆ! ಐದಾರೂ ನಿಮಿಷ ಕುಂತಿದ್ದರಷ್ಟೆ! ಎದ್ದು ಹೋದರು! ಮತ್ತೆ ಅವ್ರು ನನ್ನ ನೋಡಲು ಇಷ್ಟಪಡಲಿಲ್ಲ; ಮಾತೂ ಆಡಿಸಲಿಲ್ಲ' ಅಳತೊಡಗಿದಳು ಶಿವದೇವಿ.


'ನಿನ್ಗ ನೀನು ಮೋಸ ಮಾಡಿಕೊಂಡಿ ಅಂತ ಅನ್ನಿಸಿತೇನು?'

'ಅಕ್ಕ... ಅಕ್ಕ... ನನ್ಗ ನಲವತ್ತು ವರ್ಷಗಳಾಗಿದ್ದವು! ಬಂಧು ಬಳಗ ಯಾರೂ ಇರಲಿಲ್ಲ. ತಾಯಿ ತೀರಿಕೊಂಡಿದ್ದಳು. ತಂದೆ ಬಿಟ್ಟು ಹೋಗಿದ್ದ. ಇಂಗ್ಲಿಷ್ ಮಿಡಿಯಮ್ ಹುಡುಗಿಯರಿಗೆ ಕನ್ನಡ ಪಾಠ ಹೇಳುತ್ತ ನಾಕಾರು ಮನೆ ಅಲೆಯುತ್ತ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದೆ. ಜ್ಯೂನಿಯರ್ ಕಾಲೇಜು ಸೇರಿದ ಮ್ಯಾಲೆನೇ ಶಾಂತಲಿಂಗಪ್ಪ ಸರ್ ನನ್ನನ್ನು ಗೌರವಿಸಿದ್ದು. ಅವರನ್ನ ಕಂಡ ಮ್ಯಾಲೇನೇ ನನ್ನ ಜೀವನ ಸಹ್ಯವಾಗತೊಡಗಿತ್ತು. ಬಹಳ ಹಚ್ಚಿಕೊಂಡರು. 'ಮದುವೆ ಆಗುತ್ತಿಯಾ' ಎಂದು ಸ್ವಲ್ಪ ಮೊದಲೇ ಅವ್ರು ಹೇಳಲಿಲ್ಲ. ಮೇಲಾಗಿ ನನ್ಗ ಅವರನ್ನು ತಂದೆ ಸಂಬಂಧದಲ್ಲಿ ಮಾತ್ರ ಕಲ್ಪಿಸಿಕೊಂಡು ಬಂದಿದ್ದೆ. ನನ್ನಂಥ ನತದೃಷ್ಟೆಯನ್ನು ಅವರ್‍ಯಾಕೆ ಮದುವೆಯಾಗ್ತಾರ? ಆ ಕನ್ಸೆ ನಾನು ಕಂಡಿರಲಿಲ್ಲ...'

'...ಸ್ವಲ್ಪ ಮೊದಲೇ ಹೇಳಲಿಲ್ಲ ಅಂದಿಯಲ್ಲ...'

'ಹೌದಕ್ಕ, ಅವ್ರು ಕೇಳುವ ಹೊತ್ತಿನಲ್ಲೇ ನನ್ಗ ಒಬ್ಬ ಸಂಗಾತಿ ಸಿಕ್ಕಿದ್ದ. ನನ್ನ, ಅವನ ಅಂತಸ್ತು, ಸ್ಥಾನಮಾನ ಸಮ ಇದ್ದವು. ಅರ್ಪಿಸಿಕೊಂಡಿದ್ದೆ...'

'ಹ್ಞೂ, ಸರಿ ಬಿಡು, ಅಪ್ಪ ಆತ್ಮಚರಿತ್ರೆ ಬರ್ದಿದ್ದಾನ. ಕೊನೆಯ ಭಾಗ ತನ್ನ-ನಿನ್ನ ಸಂಬಂಧದ ಬಗ್ಗೆ ಬರ್ದಿದ್ದಾನ! ನೀನು ಇಲ್ಲೇ ಇರುವುದು ನನ್ಗ ತಿಳಿತು. ಒಮ್ಮೆ ನೀನೂ ಆ ಭಾಗ ಓದು. ಏನನ್ನಾದ್ರು ತೆಗಿಬೇಕು ಅಂತ ನಿನ್ಗ ಅನ್ನಿಸಿದ್ರೆ ಹೇಳು. ನಾನೇ ತೆಗಿತಿನಿ. ತಿದ್ದುಪಡಿ ಮಾಡ್ತೀನಿ' ಎಂದು ವೇದವತಿ ಹೇಳಿದಾಗ ಶಿವದೇವಿ ಅಚ್ಚರಿಯಿಂದಷ್ಟೇ ನೋಡಿದಳು. 'ನಾಳೆ ತಂದು ಕೊಡ್ತೀನಿ' ಎಂದು ಅಲ್ಲಿಂದ ಬಂದಳು.



6

'ಸರ್ ಬರ್ದಿರುವ ಆತ್ಮಚರಿತ್ರೆ ಓದಿದೆ ಅಕ್ಕ. ಸರ್ 'ಶಿವದೇವಿಯನ್ನು ಆರಂಭದಲ್ಲಿ ನಾನು ಪ್ರೀತಿಸಲಿಲ್ಲ. ವರ್ಷ ಕಳೆದ ಮ್ಯಾಲೆ ನಾನು ಆಕೆಯನ್ನು ಸಂಗಾತಿಯನ್ನಾಗಿ ಮಾಡಿಕೊಳ್ಳಬೇಕೆಂದು ಅನ್ನಿಸಿ ಹಂಬಲಿಸಿದೆ. ಹೆಂಡತಿಯೇ ಶಿವದೇವಿ ಎಂದು ತಿಳಿದು ಒಂದು ದಿನ ಆಕೆಯ ಮುಂದೆ ಧೈರ್ಯದಿಂದ ಪ್ರಸ್ತಾಪಿಸಿದ್ದೇ ತಡ 'ನಿಮ್ಮನ್ನ ತಂದೆ ಎಂದು ತಿಳಿದಿದ್ದೇನೆ' ಅಂದಳು. ನನ್ನ ಉಸಿರು ನಿಂತಂತಾಯಿತು! ಕೊನೆಗಾಲದಲ್ಲಿ ಮಗಳನ್ನು ಪ್ರೇಮಿಸಿ ಮದುವೆಯಾಗ ಬಯಸಿದೆನಲ್ಲ ಎಂಬ ಅಪರಾಧ ಭಾವ ತುಂಬಿತು. ಶಿವದೇವಿ ಬೇಡ ಎಂದು ನಿರಾಕರಿಸಿದ್ದರೆ, ನನ್ನ ತಪ್ಪನ್ನು ತಿದ್ದಿಕೊಳ್ಳುತ್ತಿದ್ದೆ. ಆದ್ರೆ, 'ನಿಮ್ಮನ್ನು ತಂದೆ ಎಂದು ತಿಳಿದಿದ್ದೇನೆ' ಎಂದು ಹೇಳಿ ನನ್ನಲ್ಲಿ ಪಾಪಪ್ರಜ್ಞೆ ಬಿತ್ತಿದಳು! ಶಿವದೇವಿ ನನ್ಗ ಮೋಸ ಮಾಡಲಿಲ್ಲ. ನಾನೇ ಮೋಸ ಹೋದೆ. ಅವಳದೇನೂ ತಪ್ಪಿಲ್ಲ. ನನಗೆ ಜೀವನ ಸಾಕು ಅನ್ನಿಸಿತು' ಎಂದು ಬರೆದದ್ದು ಓದಿದೆ ಅಕ್ಕ. ಎದೆಯಲ್ಲಿ ಮುಳ್ಳು ಮುರಿದು ಹೋಯಿತು...' ಜೋರಾಗಿ ಅಳತೊಡಗಿದಳು. 'ಅವರ ಸಾವಿಗೆ ನಾನೇ ಕಾರಣಳಾದೆ. ನನ್ನಿಂದ ದೇವ್ರನ್ನು ಕಾಣುವುದು ಸಾಧ್ಯವಿಲ್ಲ. ಆದ್ರ ಆದ್ರ ದೇವರಿಗಿಂತ ಶಾಂತಲಿಂಗಪ್ಪ ಸರ್ ಕಮ್ಮಿ ಇರಲಿಲ್ಲಕ್ಕ' ಎಂದು ಸುಧಾರಿಸಿಕೊಂಡಳು.

'ಏನನ್ನು ತೆಗೆದು ಹಾಕಬೇಕು ಹೇಳು. ನಿನ್ಗ ಕಳಂಕ ತರುವಂತದ್ದು ತೆಗೆದು ಬಿಡೋಣ' ವೇದವತಿ ಮಾತಿಗೆ ಶಿವದೇವಿ ತನ್ನಲ್ಲಿ ಮಗ್ನಳಾಗಿ ಕೊನೆಗೆ 'ಏನು ತೆಗಿಬೇಡಕ್ಕ, ಸರ್ ಬರದದ್ದು ನಿಜವಿದೆ. ತೆಗೆದು ಹಾಕುವ ಹಕ್ಕು ನಮ್ಗಿಲ್ಲ' ಎಂದಳು.

ಶಿವದೇವಿಯ ಮಾತನ್ನು ಕೇಳಿ, ನನ್ನ ಉಸಿರಾಟ ಬಿಸಿಯಾಯ್ತು. ನಾನು ಮಾಡಿದ್ದ ತಪ್ಪು ಕಾಡತೊಡಗಿತು. ಅಲ್ಲಿಂದ ಎದ್ದು ಬರಲಾಗದಷ್ಟು ಕುಸಿದುಹೋಗಿದ್ದೆ. 'ಪುಸ್ತಕ ಬಿಡುಗಡೆ ಸಮಾರಂಭಕ್ಕ ಬಾ ಶಿವದೇವಿ' ಎಂದು ಹೇಳುವುದು ಕೂಡ ಮರೆತು ಹೋಯಿತು!

●